**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆ ರವರ ವಿರುದ್ಧ **ಲೋಕಾಯುಕ್ತ** ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು – **ಆದೇಶ.**

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/844/ಗ್ರಾಪಂಕಾ/2016, ದಿನಾಂಕ:08-02-2017.
2. ಅಪರ ನಿಬಂಧಕರು ವಿಚಾರಣೆಗಳು-12, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-2/DE/318/2017/ARE-12, ದಿನಾಂಕ: 01-04-2019.
3. ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-2/DE/318/2017/ARE-12, ದಿನಾಂಕ: 03.04.2019.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಪತ್ರ ಸಂಖ್ಯೆ: ಗ್ರಾಅಪ 173 ಗ್ರಾಪಂಕಾ 2019, ದಿನಾಂಕ: 15.04.2019.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಅಪರ ನಿಬಂಧಕರು ವಿಚಾರಣೆಗಳು-12, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಹೋಬಳಿಯ ಕೆಲಗೆರೆ ಗ್ರಾಮದ ಗ್ರಾಮಠಾಣಾ ನಿವೇಶನ ಕ್ರಮ ಸಂಖ್ಯೆ: 322, ವಿಸ್ತೀರ್ಣ 50*15 ಅಳತೆಯುಳ್ಳ ನಿವೇಶನವನ್ನು ದಿನಾಂಕ:05.05.2011 ರಂದು ದೂರುದಾರರಾದ ಶ್ರೀಮತಿ ಸಾವಿತ್ರಮ್ಮ ಕೋಂ ಕೆ.ಜವರೇಗೌಡ ಬಿನ್ ಲೇಟ್ ಹಾಳೇಗೌಡ ರವರಿಂದ ಶುದ್ಧ ಕ್ರಮ ಪತ್ರದ ಮೂಲಕ ರೂ. 12,000/-ಗಳಿಗೆ ಖರೀದಿಸಿರುತ್ತಾರೆ. ಈ ಸಂಬಂಧ ಮೇಲ್ಕಂಡ ಸ್ವತ್ತು ದಿನಾಂಕ: 08.12.2011 ರಂದು ದೂರುದಾರರ ಹೆಸರಿಗೆ ಖಾತೆ ಕೂಡ ಆಗಿದ್ದು, ಇದಕ್ಕೆ ತಗಲುವ ಕಂದಾಯವನ್ನು ಸಹಾ ದೂರುದಾರರು ಪಾವತಿಸಿರುತ್ತಾರೆ. ಹೀಗಿರುವಾಗ, ನೀವು ಶ್ರೀಮತಿ ಜಯಲಕ್ಷ್ಮಮ್ಮ ಕೋಂ ಕೆಂಪೇಗೌಡ ರವರ ಹೆಸರಿಗೆ ಸದರಿ ಸ್ವತ್ತಿನ ಖಾತಾ ವರ್ಗಾವಣೆ ಮಾಡಬೇಕಾದರೆ ಅಗತ್ಯ ದಾಖಲಾತಿಗಳನ್ನು ಅಂದರೆ ಶುದ್ಧ ಕ್ರಯ ಪತ್ರದ ಆಧಾರದ ಮೇಲೆ ಖಾತಾ ವರ್ಗಾವಣೆ ಮಾಡಬೇಕಾಗಿರುವುದು ನಿಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ ನೀವು ಆ ರೀತಿಯ ಕ್ರಮ ಬದ್ಧವಾದ ಯವುದೇ ದಾಖಲಾತಿಗಳನ್ನು ಪಡೆಯದೇ ದಾಖಲಾತಿಗಳನ್ನು ಪರಿಶೀಲಿಸದೇ ಕೇವಲ ನೋಂದಣಿಯಾಗದ ಕ್ರಮದ ಕರಾರು ಪತ್ರದ ಆಧಾರದ ಮೇಲೆ ಮೇಲ್ಕಂಡ ಸ್ವತ್ತಿನ ಖಾತೆಯನ್ನು ಶ್ರೀಮತಿ ಜಯಲಕ್ಷ್ಮಮ್ಮ ಕೋಂ ಕೆಂಪೇಗೌಡ ರವರ ಹೆಸರಿಗೆ ಅಕ್ರಮವಾಗಿ ಖಾತಾ ವರ್ಗಾವಣೆ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುತ್ತಾರೆಂದು ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರನ್ವಯ ದುರ್ನಡತೆ ಎಸಗಿರುತ್ತಾರೆ."

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಅಪರ ನಿಬಂಧಕರು ವಿಚಾರಣೆಗಳು-12, ಕರ್ನಾಟಕ ಲೋಕಾಯುಕ್ತ ಇವರು ಶ್ರೀ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆ ಇವರ ವಿರುದ್ಧದ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ, ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ವಿಚಾರಣಾಧಿಕಾರಿರವರ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಸದರಿಯವರ ವಿರುದ್ಧದ ಕರ್ತವ್ಯಲೋಪ ಆರೋಪವು ಸಾಬೀತಾಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ "ವಾರ್ಷಿಕ ವೇತನ ಶ್ರೇಣಿಯ ನಾಲ್ಕು ಹಂತಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ" ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆ ಇವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ. ಆದರೆ ಸದರಿ ನೋಟೀಸಿಗೆ ಆರೋಪಿತ ನೌಕರರು ಯಾವುದೇ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ.

ವಿಚಾರಣಾಧಿಕಾರಿಯವರು ತಮ್ಮ ವರದಿಯ ಕಂಡಿಕೆ 16 ರಿಂದ 21 ರಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿದೆ ಎಂದು ನಿರ್ಣಯಿಸಲು ಈ ಕೆಳಕಂಡ ಕಾರಣಗಳನ್ನು ನೀಡಿರುತ್ತಾರೆ.

The oral and documentary evidence of PW-1 would reveal that he complainant purchased a Grama Thana site No.322, measuring 50 x 15 feet of Kadalagere village from H.G. Javaregowda S/o Late Halegowda under a registered sale deed dated: 05.05.2011 and katha has been made in her name on 08.12.2011. This can be seen from Ex.P-10, P-11 and P-9(2).

It further reveals that, even then the DGO without verifying proper docuements has mutated the name of Smt. Jayalakshmamma W/o Late Kempegowda in respect of Grama Thana property site No.282/A1, comprising the property of complainant bearing katha No.322. Form No.9 and 11A are produced at Ex.P-5 & P-6 and demand register extract is produced at Ex.P-9.

It also reveals that, on 11.06.2013 a mahazar said to have been drawn as per Ex.P-8, pertaining to the property of Smt. Jayalakshmamma, which does not bear either signature of Secretary oor P.D.O of Jakkanahalli Grama Panchayath nor it bears the seal of Panchayath. As such Ex.P-8 has no evidentiary value. So, the mahazar drawn on 08.12.2011 in respect of property of complainant prevail over.

It is to be noted that, the DGO has not rebutted the evidence of PW-1 though he has filed written statement and thereafter, he is remained absent and therefore, he has been placed exparte. As such the evidence of PW-1 is remained unchallenged and there are no reasons to disbelieve the same. Such being the case, adverse inference can also be drawn as aginst the DGO.

It is thereore clear from the evidence that, DGO being responsible Panchayath Development Officer of Jakkanahalli Grama Panchayath, Pandavapura Taluk, Mandya District, has failed to perform his duties and failed to exercise the powers properly as contemplated under the provisions of Karnataka Panchayath Raj Act, 1993, which amounts to dereliction of duty/misconduct within the definition of KCS (Conduct) Rules, 1966.

On appreciation of entire evidence on record, I am of the opinion that the Disciplinary Authority has proved the charges (3) & (4) leveled against the DGO as mentioned at Annexure-1 of Articles of Charge beyond probabilities. But, in view of Charges (3) & (4), the charges (1) & (2) does not arise for consideration. Therefore, I answer Point No.1 partly in the Affirmative.

ಸರ್ಕಾರದ 2ನೇ ಕಾರಣ ಕೇಳುವ ನೋಟೀಸಿಗೆ ಆಪಾದಿತರು ಯಾವುದೇ ಸಮಜಾಯಿಷಿಯನ್ನು ನೀಡದಿರುವುದನ್ನು ಗಮನಿಸಿದೆ ಹಾಗೂ ಸದರಿ ಪ್ರಕರಣದಲ್ಲಿ ವಿಚಾರಣಾಧಿಕಾರಿಯವರು ನೀಡಿರುವ ವರದಿಯಲ್ಲಿ ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುವುದನ್ನು ಒಪ್ಪಬಹುದಾಗಿದೆ ಮತ್ತು ಆರೋಪದ ತೀವ್ರತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8(iii) ರನ್ವಯ "ವಾರ್ಷಿಕ ವೇತನ ಶ್ರೇಣಿಯ್ನು ನಾಲ್ಕು ಹಂತಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ" ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸನ್ನು ಪರಿಶೀಲಿಸಿ, ಶ್ರೀ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆ ಇವರಿಗೆ "ವಾರ್ಷಿಕ ವೇತನ ಶ್ರೇಣಿಯ ನಾಲ್ಕು ಹಂತಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ" ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/173/ಗ್ರಾಪಂಕಾ/2019</u>
<u>ಬೆಂಗಳೂರು, ದಿನಾಂಕ: 16-12-2019.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8(iii) ರ ನಿಯಮದಡಿ. ನಿರ್ಧಿಷ್ಟಪಡಿಸಿದಂತೆ ಸದರಿಯವರ **"ವಾರ್ಷಿಕ ವೇತನ ಶ್ರೇಣಿಯ ನಾಲ್ಕು ಹಂತಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

16/12/19
(ರಮೇಶ್ ಡಿ.ಓ.)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ</u>,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಪಾಂಡವಪುರ, ಮಂಡ್ಯ ಜಿಲ್ಲೆ.
6. ಶ್ರೀ ಬಿ.ವಿ.ಬಾಲಾಜಿ ಕುಮಾರ್, ಹಿಂದಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಕ್ಕನಹಳ್ಳಿ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು ಮತ್ತು ಮಂಡ್ಯ.
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.